Regd No M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 31 ಸಂಚಿಕೆ 92] ಶುಕ್ರವಾರ 6—2—48 [ಬಿಡಿ ಪ್ರತಿ 3 ಪೈ

ಹೈದರಾಬಾದು

ಗುಂಡಾಗಳ ಅತ್ಯಾಚಾರ
ಪೋ. ಸ್ಟೇಷನ್ ಮೇಲೆ ಧಾಳಿ

ವನಪರ್ತಿ ಸಂಸ್ಥಾನ — ಅಬ್ದುಲ್ ರಹಿಮಾನ್, ಮಹಬೂಬುಅಲಿ, ಪೋಸ್ಟು ಜವಾನ ಇಬ್ರಾಹಿಂ ಎಂಬ ಇತ್ತೆಹಾದುಲ್ ಮುಸಲ್ಮೀನ್ ಗುಂಡಾಗಳು ನಾಗಸ್ವನೆಂಬ ಬಡ ರೈತನ ಗಾಡಿಯನ್ನು ಬಾಡಿಗೆಗೆ ಕಟ್ಟಿಸಿಕೊಂಡು ಎಲ್ಲಿಗೋ ಹೋಗಿಬರುತ್ತಾ ದಾರಿಯಲ್ಲಿ ಹೆಂಡವನ್ನು ಕುಡಿಯಬೇಕೆಂದಾಗ ಗಾಡಿಯನ್ನು ನಿಲ್ಲಿಸಲಿಲ್ಲವೆಂಬ ಕೋಪದಿಂದ ಚೆನ್ನಾಗಿ ಹೊಡೆದರು. ಆ ರೈತನು ಊರಿಗೆ ಗಾಡಿಯನ್ನು ಹೊಡೆದುಕೊಂಡುಬಂದು ಪೋಲೀಸು ಸ್ಟೇಷನ್ನಿಗೆ ಹೋಗಿ ಠಾಣೇದಾರ್ ಬುಡಪಾನುದ್ದೀನನೊಂದಿಗೆ ಹೇಳಿಕೊಳ್ಳುತ್ತಿರಲು, ಮೇಲ್ಕಂಡ ಪೋಲೀಸು ಗುಂಡಾಗಳು ಪೋಲೀಸಿನವರಂತೆ ಅಲ್ಲಿಗೆ ಒಂದು ನಾಗನ್ನನನ್ನು ಒಂಧಿಸಿ ಹೊಡೆದರು. ಈ ವಿಷಯವು ಆ ಗ್ರಾಮದವರಿಗೆ ತಿಳಿಯಬರಲು ಅವರಲ್ಲಿ 100 ಮಂದಿ ಉದ್ರೇಕದೊಂದಿಗೆ ಸ್ಟೇಷನ್ನಿನ ಮೇಲೆ ಧಾಳಿ ಮಾಡಿ, ಆ ಗುಂಡಾಗಳನ್ನೂ ಪೋಲೀಸಿನವರನ್ನೂ ಚೆನ್ನಾಗಿ ಹೊಡೆದು ನಾಗನ್ನನನ್ನು ಬಿಡಿಸಿದರು. ಈ ಘರ್ಷಣೆಯಲ್ಲಿ ಪೋಲೀಸು ಜವಾನನಿಗೆ ಒಳ್ಳೇ ಗಾಯಗಳಾಗಿವೆ.

ಂ ಂ

ಗುಂಡಾಗಳನ್ನು ಎದುರಿಸಿ ಗೆದ್ದ ಮಂಗಳೆ

ನಾರಾಯಣಪೇಟೆ — ಹೊಲದಿಂದ ಹುಲ್ಲಿನ ಹೊರೆಯನ್ನು ಹೊತ್ತುಕೊಂಡು ಬರುತ್ತಿದ್ದ ಗಂಗವ್ವನೆಂಬಾಕೆಯನ್ನು ಮೂವರು ಗುಂಡಗಳು ಸುತ್ತುವರೆದರು. ಧೈರ್ಯವಂತಳಾದ ಆ ವೀರಾಂಗನೆಯು ಹುಲ್ಲಿನ ಹೊರೆಯನ್ನು ಅವರ ತಲೆಯ ಮೇಲೆ ಬಿಸುಟು ಕೈಯಲ್ಲಿದ್ದ ಕುಡುಗೋಲಿನಿಂದ ಒಬ್ಬನ ಬೆಂಕುಗಳನ್ನು ಕತ್ತರಿಸಿ ಹಾಕಿದಳು. ಇನ್ನೊಬ್ಬನ ಭುಜವನ್ನು ಗಾಯಪಡಿಸಿದಳು. ಮೂರನೆಯವನು ಓಡಿಹೋದನು.

ಂ ಂ

ಕಾಂಗ್ರೆಸ್ಸಿನ ಕಾರ್ಯ

ಕಾಂಗ್ರೆಸ್ಸು ಕಾರ್ಯಕರ್ತರ ಪ್ರಚಾರದ ಫಲವಾಗಿ ಗ್ರಾಮಗಳಲ್ಲಿಯ ಪ್ರಜೆಗಳು ಕಲೆತು, ಸಂಕರಡ್ಡಿಪಲ್ಲಿ ಎಂಬ ಸ್ಥಳದಲ್ಲಿ 200 ಈಚಲು ಗಿಡಗಳನ್ನು ಕತ್ತರಿಸಿದರು. 1500 ಗಿಡಗಳಿಗೆ ಕಟ್ಟಿ ಹಾಕಿದ್ದ ಗಡಿಗೆಗಳನ್ನು ಒಡೆದುಹಾಕಿದರು. [ಜ್ಯೋ]

ಹಿಂದೂ ಮಹಾಸಭೆ ಆಡಗಿಸಲು ಸರ್ದಾರ್ ಪಟೇಲರ ವಿರೋಧ

ಗಾಂಧೀಜೀ ಅಸ್ಥಿಯೊಡನೆ ಪಶ್ಚಿಮ ಬಂಗಾಳ ಗವರ್ನರ್ ಶ್ರೀ ಸಿ. ರಾಜಗೋಪಾಲಾಚಾರ್ಯರು ಕಲ್ಕತ್ತಾವನ್ನು ಸೇರಿದರು. ಗುಂಗಾಜಲದಲ್ಲಿ ಅಸ್ಥಿಯನ್ನು ಕಡಡಲಾಗುವುದು.

ಅಸ್ಸಾಂ ಗವರ್ನರ್ ಸರ್ ಅಕ್ಬರ್ ಹೈದರಿ ಗಾಂಧೀಜೀ ಅಸ್ಥಿಯನ್ನು ಬ್ರಹ್ಮಪುತ್ರಾದಲ್ಲಿ ಕದಡಲು ತೆಗೆದುಕೊಂಡು ಹೋದರು.

ಮಹಾತ್ಮ ಗಾಂಧೀಜೀಯವರ ಅಸ್ಥಿಯನ್ನು ಕೊಡಬೇಕು ಎಂದು ಭಾರತ ಸಂಕಾರವನ್ನು ವೈಸೂರು ಸಂಸ್ಥಾನಕ್ಕೇ ಕಳಿದೆ.

ಗಾಂಧೀಜೀಯ ಅಸ್ಥಿಯನ್ನು ಇದೇ ತಾ || 11 ರಸುಜೆ ವರೆಗೆ ಮದರಾಸಿನಲ್ಲಿ ತೋರಿಸಲಾಗುವುದು.

ಪೂರ್ವ ಪಂಜಾಬ್ ಗವರ್ನರ್ ಸರ್. ಚಂದೂಲಾಲ್ ತ್ರಿವೇದಿ ಗಾಂಧೀಜೀ ಅಸ್ಥಿಯನ್ನು ಸಟ್ಲೆಜ್ ನದಿಯಲ್ಲಿ ಬಿಡುವ ಸಲುವಾಗಿ ತೆಗೆದುಕೊಂಡು ಹೋದರು.

ಗಾಂಧೀಜೀ ಸ್ಮಾರಕವಾಗಿ ದಿಹಲಿಯಲ್ಲಿ ಗಾಂಧೀಜೀ ಸ್ಟೇಡಿಯಂ ಕಟ್ಟಬೇಕೆಂದು ಭಾರತ ಕ್ರಿಕೆಟ್ ಸಂಘದ ಅಧ್ಯಕ್ಷ ಮಿ || ಡಿಪಿ. ಜೋ ಹೇಳಿದ್ದಾರೆ

ಹಿಂದೂ ಮಹಾಸಭೆಯ ಮಾಜೀ ಅಧ್ಯಕ್ಷ ವೀರ್ ಸಾವರ್ಕರರನ್ನು ಮುಂಬಯಿಯಲ್ಲಿ ನಾಥಸಬದ್ಧತೆಯಲ್ಲಿಡಲಾಗಿದೆ ಹಿಂದೂ ಮಹಾಸಭೆಯ ಪ್ರಮುಖ ಜನ್ಮದಾಸ್ ಮೆಹತ್ತರನ್ನು ಖುಲಾಸೆ ಮಾಡಬಹುದು.

ಮಾಹಿಂಗ್‌ಟ್ಟ್ ನಗರದಲ್ಲಿ ಗಾಂಧೀಜೀ ಪ್ರತಿಮೆ ನಿರ್ಮಾಣಕ್ಕೆ ಅನುಮತಿ ಕೊಡಬೇಕೆಂದು ಪ್ರತಿನಿಧಿ ಸಭೆಯಲ್ಲಿ ಇಮಾನ್ಯುಯಲ್ ಸೆಲ್ಲರ್ ನಿರ್ಣಯವನ್ನು ಇಟ್ಟಿದ್ದಾರೆ.

ಮಹಾತ್ಮ ಗಾಂಧೀಜೀಯವರನ್ನು ದಹನ ಮಾಡಿದ ರಾಜಾಘಾಟಿನ ಸುತ್ತ ವನ ನಿರ್ಮಿಸುವ ಏರ್ಪಾಡಾಗುತ್ತಿದೆ.

ಗಾಂಧೀಜಿಯನ್ನು ಕೊಂದ ವಿನಾಯಕ ಗೂಡ್ಸೆ ಸಾವರ್ಕರರೊಡನೆ ಶಿವಮೊಗ್ಗಕ್ಕೆ ಒಂದಿದ್ದನೆಂದು ವಾರ್ತೆ ಬಿಂಗಳೂರಿನಲ್ಲಿ ನಡೆದ ಸ್ವಯಂಸೇವಕರ್ಯಾಲಿಗೂ ಅವರು ಬಂದಿದ್ದರೆಂದು ಸುದ್ದಿ.

ಸನಗೂ ಸರ್ದಾರ್ ಪಟೇಲರಿಗೂ ಮತಭೇದವಿಲ್ಲ ಎಂದು ಪಂ || ನೆಹರು ಕೇಂದ್ರ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ತಿಳಿಸಿದ್ದಾರೆ.

ಸವದೆಹಲಿ, ಫೆ 4 — ಭಾರತ ಸರಕಾರದ ಉಪ ಪ್ರಧಾನಿ ಸರ್ದಾರ್ ಪಟೇಲರು ಕೇಂದ್ರ ಶಾಸನ ಸಭೆಯ ಕಾಂಗ್ರೆಸ್ ಸದಸ್ಯರುಗಳ ಸಭೆಯಲ್ಲಿ ಹಿಂದೂ ಮಹಾಸಭೆಯನ್ನು ಅಡಗಿಸುವುದು ಪ್ರಜಾಪ್ರಭುತ್ವ ತತ್ವಕ್ಕೆ ಅನುಗುಣವಾದುದಲ್ಲವೆಂದು ಹೇಳಿದರು ಎಂದು ವರದಿಯಾಗಿದೆ ಭಾರತ ರಾಜ್ಯಾಂಗ ಕರಡಿನಲ್ಲಿ ಮುಸ್ಲಿಂರನ್ನು ಪ್ರತ್ಯೇಕ ಭಾವದಿಂದ ಭಾವಿಸಿರುವುದರಿಂದ ಹಿಂದೂಗಳನ್ನು ತಿರಸ್ಕರಿಸಲಾರೆವು ಎಂದು ಅವರು ಹೇಳಿದ್ದಾರೆ.

ಮಾನವರಲ್ಲಿ ಪ್ರೇಮಸೌಹಾರ್ದತೆ

ಗಳನ್ನು ಬೆಳಿಸುವದಕ್ಕಾಗಿ

ಆತ್ಮಾರ್ಪಣೆ ಮಾಡಿರುವ

ಜಗದ್ವಂದ್ಯ ಗಾಂಧೀಜಿ

ನಮ್ಮನ್ನಗಲಿದ 8 ನೇ ದಿನ

ಭಾರತ ಸತ್ಕಿಕೆಗಳೆಲ್ಲವೂ ಮಹಾತ್ಮರ ಜ್ಞಾಪಕಾರ್ಥವಾಗಿ ತಾ || 12 ರಲ್ಲಿ ಪ್ರಕಟಣೆ ನಿಲ್ಲಿಸಬೇಕೆಂದು ಇಂಡಿಯನ್ ಮತ್ತು ಈಸ್ಟರ್ನ್ ನ್ಯೂಸ್‌ಪೇಪರು ಸೊಸೈಟಿಯವರು ಕೋರಿದ್ದಾರೆ

ಂ ಂ

ಗಾಂಧೀಜಿ ಸ್ಮಾರಕ ಪುಸ್ತಕಭಂಡಾರವನ್ನು ಸ್ಥಾಪಿಸಲು ಕಾನ್‌ಪುರದ ಸದ್ದಿಕರು 25 ಸಾವಿರ ರೂ. ಕೊಟ್ಟಿದ್ದಾರೆ.

ಂ ಂ

ಮೈಸೂರು ಜವಳೀ ವರ್ತಕ ಸಂಘದವರು ಮಹಾತ್ಮಾಜೀ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯ ಮಾಡಿದ್ದಾರೆ — ತಾ || 12 ರಲ್ಲಿ ಬಡಬಗ್ಗರಿಗೆ ಬಟ್ಟೆ ಹಂಚಲಾಗುವುದೆಂದೂ, ಆ ದಿನ ಜವಳಿ ವರ್ತಕರು ತಮ್ಮ ಅಂಗಡಿಗಳನ್ನು ಪೂರ್ತಿ ದಿವಸ ಮುಚ್ಚಬೇಕೆಂದೂ ಕೋರಿದ್ದಾರೆ

ಂ ಂ

ಕೇಂದ್ರ ಶಾಸನ ಸಭೆಯ ಮಾಜೀ ಉಪಾಧ್ಯಕ್ಷರು ಗಾಂಧಿಯವರ ನಿಧನದ ಬಗ್ಗೆ ಇತ್ತೀಚಿನ ಹೇಳಿಕೆಯಲ್ಲಿ ಭಾರತ ಮುಸಲ್ಮಾನೀಯರೆಲ್ಲರೂ ಕಾಂಗ್ರೆಸ್ಸನ್ನು ಸೇರಬೇಕೆಂದಿದ್ದಾರೆ.

ಂ ಂ

ಮದರಾಸು ಕುದುರೆ ಪಂಧ್ಯ ಸಂಘ ಗಾಂಧೀಜೀ ನಿಧನದ ಸಂತಾಪಸೂಚಕವಾಗಿ ಇದೇ ತಾ || 14 ರವರೆಗೆ ಜರಿಗಳನ್ನು ನಿಲ್ಲಿಸಲು ತೀರ್ಮಾನಿಸಿದೆ.

ಒಂದು ಸೇರು ಸೀಮೆ ಎಣ್ಣೆಯ ಬೆಲೆ 3 ಆಣೆ ಎಂದು ಮದರಾಸು ಸರಕಾರ ಪ್ರಕಟಿಸಿದೆ.

4—2—48 ರಿಂದ — — 2 ನೇ ವಾರ

ಮೈಸೂರು ನ್ಯೂ ಅಪೇರಾ ಟಾಕೀಸಿನಲ್ಲಿ

ಪಿಟ್ಟರ್ರವರ—

ಕನ್ನಗಿ

(ತಮಿಳು) ದಿನ 3 ಆಟಗಳು

ನಾಶ್ಯ— ಚಿನ್ನಪ್ಪ, ಕನ್ನಾಂಬ, ಕೃಷ್ಣ, ಮಧುರಂ

— Distributors — (ಶುಭ)

Sri Vijaya Pictures. Gandhinagar, Bangalore City.

ಹಡಗು ಮಾರ್ಕಿನ ಹಿಂಗಿನ ಪುಡಿ

ಹೆಚ್ಚಿನ ಗುಣವುಳ್ಳದ್ದು



ಈ ಹಿಂಗಿನ ಪುಡಿ ನೀರನ್ನು ಸೇರಿಸದೆ ಶಯಾಂಸಿದ ಶಾಸ್ತ್ರೀಯ ಪರಿಶುದ್ಧವಾದವ್ದು. ಎಲ್ಲಾ ಸನಾತನನನು ಸಂಸಾರಗಳಲ್ಲೂ ಉಪಯೋಗಿಸಲರ್ಹವಾದುದು. ಆಹಾರ ಸನಾರ್ಥಗಳಿಗ್ಗೆ ಒಂದು ಚಿಟಿಗೆ ಪುಡಿಯನ್ನು ಸೇರಿಸಿದ್ದೇ ಆದರೆ. ಅತಿ ಸುಮನೋಹರ ವಾಸನೆಯನ್ನು ಮತ್ತು ರುಚಿಯನ್ನು ಕೊಡುತ್ತದೆ ದೇಹದ ಎಲ್ಲಾ ವ್ಯಾಧಿಗಳಿಗೂ ಉಪಯುಕ್ತವಾದ ಸಂಸಾರದ ಔಷಧಿ. ಒಂದು ಸಲ ಉಪಯೋಗಿಸಿದಲ್ಲಿ ಮತ್ತೆ ಬೇರಾವುದನ್ನೂ ಉಪಯೋಗಿಸದಂತೆ ಮಾಡುವುದಲ್ಲದೇ. ಇದನ್ನೇ ಸದಾ ಉಪಯೆಕ್ಕಾಗಿಸುವಂತೆ ಪ್ರೇರೇಪಿಸುವುದು. ಒಂದು ಪೌಂಡು ಈ ಹಿಂಗು ನಾಲ್ಕು ಪೌಂಡ ಬಿಳಿ ಹಿಂಗಿಗೆ ಸಮಾನವಾದುದು.

ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲಿಯೂ ಒಂದು ಪೌಂಡು, ಒಂದು ಸೇರು ಅರ್ಧ ಸೇರು, ಒಂದು ಪಲಂ (ಪ್ಯಾಕೆಟ್ಟುಗಳಲ್ಲಿ) ದೊರೆಯುತ್ತದೆ ಒಂದು ಪೌಂಡಿನ ಬೆಲೆ ರೂ. 3—8—0

ನಮ್ಮ ಎ ಮತ್ತು ಟಿ. ಜಿ ಮಾರ್ಕಿನ ಬಿಳೀ ಹಿಂಗು ಮತ್ತು ನಮ್ಮ ಶ್ರೀ ಓಂ ಮಾರ್ಕಿನ ಶುದ್ಧ ಕೇಸರಿ, ಸರ್ವ ಮಾರ್ಕಿನ ಕೇಸರಿ ಮತ್ತು ಸುವಾಸನೆ ಅಡಿಕೆ ಪುಡಿ ನಮ್ಮ ವೈಶಿಷ್ಟ್ಯ.

ವಲ್ಲಭದಾಸ್ ತೇಜ್‌ಪಾಲ್

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

ವುಡ್‌ಲ್ಯಾಂಡ್ಸ್

ಕೀರ್ತಿದಾಯಕ 4 ನೇ ವಾರ

DIN-RAAT

ಸ್ನೇಹಪ್ರಭಾ

ಸುರೇಶ್ ಬ್ಯಾನರ್ಜಿ

ಪಾತ್ರವಹಿಸಿರುವ

ದಿನ್-ರಾತ್

(ಅಮೋಘ ಹಿಂದೀ ಚಿತ್ರ)

— Karnataka Films Release —

Woodlands

For 4 Days From 6—2—48

— ಬೆಳಗಿನ ಪ್ರದರ್ಶನ —

ಮುಮ್ತಾಜ್ ಶಾಂತಿ ಪಾತ್ರವಹಿಸಿರುವ

ಬದಲ್‌ತಿದುನಿಯ

(ಸೋಡಲೇಬೇಕಾದ ಹಿಂದಿ ಚಿತ್ರ)

Edited, Printed and Publishd by M S Krishna Rao at the Satyavadi Press Chamaraja Agahar Mysore

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್

ಹರಾಜು ಇಸ್ತಿಹಾರ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ— ಜಯಲಕ್ಷ್ಮಿಪುರಂನಲ್ಲಿ ನಿವೇಶನ ಮಂದಿರವನ್ನು ಕಟ್ಟಲು ಬಂದು ಭಾರ ನಿವೇಶನವನ್ನು, ನಿವೇಶನದ ಒಳ ತಾ || 16—2-48 ನೇ ಸೋಮವಾರ ಬೆಳಿಗ್ಗೆ 10 ಗಂಟೆಗೆ ಹರಾಜು ಮಾಡಲಾಗುತ್ತೆ.

ಹೆಚ್ಚಿನ ವಿವರಗಳನ್ನು ಛೇರ್ಮೆರವರ ಆಫೀಸಿನಿಂದ ತಿಳಿದು ಕೊಳ್ಳಬಹುದು.

ನಿವೇಶನದ ಅಳತೆ 6302 ಚದರ ಗಜಗಳು.

(ಸಹಿ) ಪಿ. ಸೀತಾರಾಮಯ್ಯ

ಛೇರ್ಮೆರ್

ಅಂದ, ಚಂದ, ಗುಣ, ಇವೆಲ್ಲಕ್ಕೂ

ಮೈಸೂರು ಮರದ ನಾಮಾನುಗಳು

ಸಹಜವಾದ ಅಚ್ಚುಕಟ್ಟು, ನಾಜೂಕಾದ ಮೈಕಟ್ಟು ಸೌಂದರ್ಯ, ನಿಸ್ಸಂಶಯವಾದ ಗುಣ. ಇವೆಲ್ಲವನ್ನೂ ಹೊಂದಿರುವುವು.

ಉಪಯೋಗಿಸುವವರೆ ಅನುಕೂಲಾನುಗಳನ್ನು ವಿಮರ್ಶಿಸಲಿ ಅವರವರ ಇಷ್ಟಾನುಗುಣವಾಗಿ, ಕುಶಲಗಾರರಾದ ಕೆಲಸಗಾರರಿಂದ ಸಾಮಾನುಗಳನ್ನು ತಯಾರಿಸಿ ಕೊಡುತ್ತೇವೆ.

ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್

ಮೈಸೂರು

SHAKTI SUDHA

A Superb TONIC